ವಿ-330
ಕ್ರ 40

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮಂತಿಬೈರೇಗೌಡ, ಇವರ ನಿಯಮ 330 ರ ಅಡಿಯಲ್ಲಿನ ಗಮನ ಸೆಳೆಯುವ ಸೂಚನೆ ಸಂಖ್ಯೆ:40 ಗೆ ಮಾನ್ಯ ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖಾ ಸಚಿವರ ಉತ್ತರ.

ಪ್ರಶ್ನೆ:

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ದೇವನಗೊಂದಿ ಗ್ರಾಮದಲ್ಲಿರುವ ಆಯಿಲ್ ಕಂಪನಿಗಳ ಆಯಿಲ್ ದಾಸ್ತಾನಿಗಳಿಂದ (ಪೆಟ್ರೋಲ್ ಮತ್ತು ಡೀಸೆಲ್) ಬಂಕುಗಳಿಗೆ ಸರಬರಾಜಾಗುವ ಟ್ಯಾಂಕರುಗಳಲ್ಲಿ ಬೇಬಿ ಟ್ಯಾಂಕ್ ಅಳವಡಿಸಿಕೊಂಡು, ಭಾರಿ ಅವ್ಯವಹಾರ ನಡೆದಿರುವುದಾಗಿ ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಲ್ಲಿ ವರದಿಯಾಗಿರುತ್ತದೆ. ಈ ದಂಧೆಯಲ್ಲಿ ಭಾಗಿಯಾದವರ ವಿರುದ್ಧ ಸೂಕ್ತ ತನಿಖೆ ಮಾಡದ ಕಾನೂನು ಮಾಪನ ಇಲಾಖಾ ಅಧಿಕಾರಿಗಳು ಹಾಗೂ ಸ್ಥಳೀಯ ಪೊಲೀಸ್ ಅಧಿಕಾರಿಗಳು ಶಾಮೀಲಾಗಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಮಾಡುತ್ತಿರುವ ಗಂಭೀರ ಸಮಸ್ಯೆ ಕುರಿತು.

ಉತ್ತರ:

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸ ಕೋಟೆ ತಾಲ್ಲೂಕು ದೇವನಗೊಂದಿ ಗ್ರಾಮದಲ್ಲಿರುವ ಆಯಿಲ್ ಕಂಪನಿಗಳ ಆಯಿಲ್ ದಾಸ್ತಾನು ಪ್ರದೇಶದಿಂದ (ಪೆಟ್ರೋಲ್ ಮತ್ತು ಡಿಸೇಲ್) ಪೆಟ್ರೋಲ್ ಬಂಕುಗಳಿಗೆ ಟ್ಯಾಂಕರುಗಳ ಮುಖಾಂತರ ಪೆಟ್ರೋಲ್ ಮತ್ತು ಡಿಸೇಲ್‌ನ್ನು ಸರಬರಾಜು ಮಾಡಲಾಗುತ್ತಿದೆ. ಪೆಟ್ರೋಲ್ ಬಂಕ್‌ಗಳಿಗೆ ಪೆಟ್ರೋಲ್ ಮತ್ತು ಡಿಸೇಲ್‌ನ್ನು ಸರಬರಾಜು ಮಾಡುವ ಟ್ಯಾಂಕರ್‌ಗಳ ಒಳಗಡೆ ಬೇಬಿ ಟ್ಯಾಂಕ್‌ನ್ನು ಅಳವಡಿಸಿಕೊಂಡು ಭಾರಿ ಅವ್ಯವಹಾರ ನಡೆಸುತ್ತಿರುವುದಾಗಿ ಪೆಟ್ರೋಲ್ ಬಂಕ್ ಡೀಲರ್‌ಗಳು ದೇವನಗುಂದಿಯಲ್ಲಿರುವ ಹೆಚ್.ಪಿ.ಸಿ.ಎಲ್ ಆಯಿಲ್ ಟರ್ಮಿನಲ್‌ನ ಮುಖ್ಯಸ್ಥರಿಗೆ ದೂರನ್ನು ನೀಡಿದ್ದು, ಅದರಂತೆ ಹೆಚ್.ಪಿ.ಸಿ.ಎಲ್ ಆಯಿಲ್ ಟರ್ಮಿನಲ್‌ನ ಮುಖ್ಯಸ್ಥರು ಟ್ಯಾಂಕರ್ ಸಂಖ್ಯೆ: ಕೆಎ 01 ಎಸಿ 2468 ರಲ್ಲಿನ ತೈಲದ ಪ್ರಮಾಣದ ಬಗ್ಗೆ ಅನುಮಾನವಿರುವುದಾಗಿ ತಿಳಿಸಿ ಸದರಿ ಟ್ಯಾಂಕ್ ಟ್ರಕ್ ಸೀಲ್ ಕಟ್ ಮಾಡಲು ಕಾನೂನು ಮಾಪನಶಾಸ್ತ್ರ ಇಲಾಖೆಯ ಅನುಮತಿಯನ್ನು ಕೋರಿರುತ್ತಾರೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ಪೆಟ್ರೋಲಿಯಂ ಡೀಲರ್ ಅಸೋಸಿಯೇಷನ್‌ರವರು ಸಹ ಕಾನೂನು ಮಾಪನಶಾಸ್ತ್ರ ಇಲಾಖೆಗೆ ದೂರನ್ನು ಸಲ್ಲಿಸಿರುತ್ತಾರೆ.

ಸದರಿ ದೂರುಗಳ ಹಿನ್ನಲೆಯಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯ ವತಿಯಿಂದ ಇಲಾಖಾ ತನಿಖಾತಂಡವನ್ನು ಪರಿಶೀಲನೆಗಾಗಿ ನಿಯೋಜಿಸಲಾಗಿದ್ದು, ಅದರಂತೆ ತನಿಖಾ ತಂಡವು ಪರಿಶೀಲನೆ ಕೈಗೊಂಡಿದ್ದು ಪೆಟ್ರೋಲ್ ಟ್ಯಾಂಕರ್ ವಾಹನ ಸಂಖ್ಯೆ:ಕೆಎ 01 ಎಸಿ 2468 ರಲ್ಲಿ ಅನಧಿಕೃತ ಬೇಬಿ ಟ್ಯಾಂಕ್ ಅಳವಡಿಸಿರುವುದು ಪತ್ತೆಯಾಗಿರುತ್ತದೆ. ಸದರಿ ಅಕ್ರಮಕ್ಕೆ ಸಂಬಂಧಿಸಿದಂತೆ ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಪೊಲೀಸ್ ಠಾಣೆಯಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯ ವತಿಯಿಂದ ದೂರನ್ನು ದಾಖಲಿಸಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ ಅನುಗೊಂಡನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ಸಂಖ್ಯೆ: 0003/2022 ಅನ್ನು ದಾಖಲಿಸಿಕೊಂಡು ತನಿಖೆ ಪ್ರಗತಿಯಲ್ಲಿರುತ್ತದೆ. ಇಂತಹ ಅಕ್ರಮ ಪ್ರಕರಣಗಳಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯ ಯಾವುದೇ ಅಧಿಕಾರಿಗಳು ಪಾಲ್ಗೊಂಡಿರುವುದಿಲ್ಲ.

ಆನಾಸ 31 ಕಾಮಾಸೇ 2022 (ಇ-ಆಫೀಸ್)

(ಉಮೇಶ ವಿ. ಕತ್ತಿ)
ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.